ಕರ್ನಾಟಕ ಸರ್ಕಾರ

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಆಯುಕ್ತರವರ ಕಛೇರಿ, ಗ್ರಾ.ಕು.ನೀ.&.ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ,
ಬೆಂಗಳೂರು – 560 009. ☎ : 080-22240508 📠 : 22240509 ಈ-ಮೇಲ್: krwssd@gmail.com

ಸಂಖ್ಯೆ:RDW&SD /15/WSSO/2020-21 ದಿನಾಂಕ:**07–11–2020**

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಎಲ್ಲಾ ಜಿಲ್ಲಾ ಪಂಚಾಯತ್‌ಗಳು,

**ಮಾನ್ಯರೇ,**

**ವಿಷಯ: ಜಲ ಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಅಂಗನವಾಡಿ ಕೇಂದ್ರ, ಶಾಲೆ, ಆಶ್ರಮ ಮತ್ತು ವಸತಿ ಶಾಲೆಗಳಿಗೆ ಕೊಳವೆ ನೀರು ಸಂಪರ್ಕ ಕಲ್ಪಿಸಲು ವಿಶೇಷ ಆಂದೋಲನವನ್ನು ಆಯೋಜಿಸಿರುವ ಕುರಿತು.**

**ಉಲ್ಲೇಖ:** 1.ಕೇಂದ್ರ ಸರ್ಕಾರದ ಅರೇ ಸರ್ಕಾರಿ ಪತ್ರ ಸಂಖ್ಯೆ:11011/58/2020.JJM, ದಿನಾಂಕ:22.10.2020
2.ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:M-11015/349/2020-CB;ದಿನಾಂಕ:27.10.2020

********

ಮೇಲಿನ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಲ ಶಕ್ತಿ ಮಿಷನ್ ಭಾರತ್ ಸರ್ಕಾರವು ಜಲ ಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಅಂಗನವಾಡಿ ಕೇಂದ್ರ, ಶಾಲೆ, ಆಶ್ರಮ ಮತ್ತು ವಸತಿ ಶಾಲೆಗಳಿಗೆ ಕೊಳವೆ ನೀರು ಸಂಪರ್ಕ (ಕಾರ್ಯಾತ್ಮಕ ನಳ ಸಂಪರ್ಕ) ಕಲ್ಪಿಸಲು ವಿಶೇಷ ಆಂದೋಲನವನ್ನು ಆಯೋಜಿಸಿದೆ. ಕಳೆದ ಅಕ್ಟೋಬರ್ 02, 2020ರಂದು ಪ್ರಧಾನ ಮಂತ್ರಿಗಳು ಈ ವಿಶೇಷ ಆಂದೋಲನಕ್ಕೆ ಚಾಲನೆ ನೀಡಿರುತ್ತಾರೆ.

ಅಕ್ಟೋಬರ್ 02, 2020 ರಿಂದ 100 ದಿನಗಳ ಒಳಗಾಗಿ (ಜನವರಿ 2021 ಮೊದಲವಾರದ ಒಳಗಾಗಿ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಶುದ್ಧ, ಸುರಕ್ಷಿತ ಕುಡಿಯುವ ನೀರು ಸಂಪರ್ಕ ಇಲ್ಲದಂತಹ **ಅಂಗನವಾಡಿ ಕೇಂದ್ರಗಳು ಶಾಲೆಗಳು, ಆಶ್ರಮ ಶಾಲೆಗಳು, ವಸತಿ ಶಾಲೆಗಳು (ಹಾಸ್ಟಲ್‌ಗಳು), ಗ್ರಾಮ ಪಂಚಾಯಿತಿ ಕಚೇರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಕೇಂದ್ರಗಳು, ಸಮುದಾಯ ಶೌಚಾಲಯಗಳಿಗೆ ಕೊಳವೆ ನೀರು ಸಂಪರ್ಕ ಕಲ್ಪಿಸುವುದು, ಈ ಆಂದೋಲನದ ಮುಖ್ಯ ಗುರಿಯಾಗಿದೆ.** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಸೇರಿದಂತೆ ಇತರೆ ಸಂಬಂಧಿಸಿದ ಇಲಾಖೆಗಳೊಂದಿಗೆ ಸಮನ್ವಯ ಮಾಡಿಕೊಂಡು ಶುದ್ಧ ಸುರಕ್ಷಿತ ಕುಡಿಯುವ ನೀರು ಒದಗಿಸುವುದು ಹಾಗೂ ಶಾಲಾ ಮಕ್ಕಳಲ್ಲಿ ಉತ್ತಮ ನೈರ್ಮಲ್ಯ ಅಭ್ಯಾಸಗಳನ್ನು ರೂಢಿಸುವ ಧ್ಯೇಯೋದೇಶದಿಂದ ಈ ಆಂದೋಲನವನ್ನು ಆಯೋಜಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಹಂತಗಳಲ್ಲಿ ಈ ಆಂದೋಲನವನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲು ವಿವಿಧ ಜನ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ 100 ದಿನಗಳ ವಿಶೇಷ ಆಂದೋಲನ ಕುರಿತು ವ್ಯಾಪಕ ಪ್ರಚಾರ ಮಾಡುವುದು ಹಾಗೂ ಸಾರ್ವಜನಿಕ ಶಿಕ್ಷಣ, ಆರೋಗ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳೊಂದಿಗೆ ಸಮನ್ವಯತೆ ಸಾಧಿಸಿ, ನೀರಿನ ಸಂಪರ್ಕ ರಹಿತ ಶಾಲೆ, ಅಂಗನವಾಡಿ ಕೇಂದ್ರಗಳ ಮಾಹಿತಿಯನ್ನು ಪಡೆದು, ನಿಗಧಿತ ಸಮಯದಲ್ಲಿ ಕೊಳವೆ ನೀರು ಸಂಪರ್ಕ ಕಲ್ಪಿಸಲು ಕ್ರಮವಹಿಸಬೇಕಿದೆ. ಈ ಆಂದೋಲನ ಕುರಿತಂತೆ ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಜಲಶಕ್ತಿ ಮಿಷನ್ ಒದಗಿಸಿರುವ ಮಾರ್ಗಸೂಚಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದ್ದು ಅದರಂತೆ ಕ್ರಮವಹಿಸುವುದು.

**ಆಂದೋಲನದ ಪ್ರಮುಖ ಉದ್ದೇಶಗಳು:**

1. ಮಕ್ಕಳ ಬೆಳವಣಿಗೆಗೆ ಶುಚಿತ್ವ ಮತ್ತು ಶುದ್ಧ ಸುರಕ್ಷತ ಕುಡಿಯುವ ನೀರಿನ ಪ್ರಾಮುಖ್ಯತೆ ಕುರಿತು ಗ್ರಾಮೀಣ ಸಮುದಾಯ, ಅಂಗನವಾಡಿ ಕಾರ್ಯಕರ್ತೆಯರು, ಶಾಲಾ ಶಿಕ್ಷಕರು, ಶಾಲಾ ಆಡಳಿತ ನಿರ್ವಹಣಾ ಸಮಿತಿಯೊಂದಿಗೆ ಚರ್ಚೆ ಹಾಗೂ ಈ ಕುರಿತು ಜಾಗೃತಿ ಮೂಡಿಸುವುದು.

2. ಎಲ್ಲಾ ಅಂಗನವಾಡಿ ಕೇಂದ್ರಗಳು, ಶಾಲೆ, ಆಶ್ರಮಶಾಲೆ (ವಸತಿ ಶಾಲೆ)ಗಳಲ್ಲಿ ನಿರಂತರ ಶೌಚಾಲಯ ಬಳಕೆ, ನೀರಿನ ಸರಬರಾಜು, ವೈಯಕ್ತಿಕ ಶುಚಿತ್ವ, ಉತ್ತಮ ನೈರ್ಮಲ್ಯ ಅಭ್ಯಾಸಗಳ ಪ್ರಾಮುಖ್ಯತೆ ಕುರಿತು ವ್ಯಾಪಕ ಅರಿವು ಮೂಡಿಸುವುದು.

3. ಎಲ್ಲಾ ಅಂಗನವಾಡಿ ಕೇಂದ್ರಗಳು, ಶಾಲೆ, ಆಶ್ರಮಶಾಲೆ (ವಸತಿ ಶಾಲೆ)ಗಳಲ್ಲಿ, ಹಾಸ್ಟಲ್‌ಗಳಲ್ಲಿ ಕುಡಿಯಲು, ಅಡಿಗೆ ತಯಾರಿಸಲು, ಮಧ್ಯಾಹ್ನದ ಊಟ ಸಿದ್ಧಪಡಿಸಲು, ಕೈತೊಳೆಯಲು ಹಾಗೂ ಶೌಚಾಲಯ ಬಳಕೆಗಾಗಿ ಅಗತ್ಯ ನೀರು ದೊರಕುವಂತೆ ಮಾಡಲು ಯೋಜನೆ ರೂಪಿಸಿ, ಅದರಂತೆ ನಿಗಧಿತ ಅವಧಿಯ ಒಳಗೆ ಗುರಿ ಸಾಧನೆ ಮಾಡುವುದು.

4. ಎಲ್ಲಾ ಗ್ರಾಮ ಪಂಚಾಯಿತಿ ಕಟ್ಟಡಗಳು, ಆರೋಗ್ಯ ಕೇಂದ್ರಗಳು, ಸಮುದಾಯ ಕೇಂದ್ರ, ಸಮುದಾಯ ಶೌಚಾಲಯಗಳಿಗೆ ಕೊಳವೆ ನೀರು ಸರಬರಾಜು ಸಂಪರ್ಕ ಕಲ್ಪಿಸುವುದು. ಹಾಗೂ ದೀರ್ಘ ಕಾಲ ಅವುಗಳನ್ನು ನಿರ್ವಹಣೆ ಮತ್ತು ಕಾರ್ಯಚರಣೆಯಲ್ಲಿರುವಂತೆ ಯೋಜನೆ ರೂಪಿಸಿ ಅದರಂತೆ ಕ್ರಮವಹಿಸುವುದು.

5. ಜಲಜೀವನ್ ಮಿಷನ್ ಯೋಜನೆಯ ಮುಖ್ಯ ಗುರಿಯಾದ ಮನೆಮನೆಗೆ ಕಾರ್ಯಾತ್ಮಕ ನಳ ಸರ್ಂಕ ಕಲ್ಪಿಸುವ ಸಂಬಂಧ ಜಾಗೃತಿ ಮತ್ತು ಪ್ರೇರೇಪಣೆ ಮಾಡುವ ಕಾರ್ಯಕ್ರಮಗಳಲ್ಲಿ ಹಾಗೂ ಉತ್ತಮ ಸುರಕ್ಷಿತ ನೈರ್ಮಲ್ಯ ಅಭ್ಯಾಸಗಳನ್ನು ರೂಢಿಸುವ ಚಟುವಟಿಕೆಗಳಲ್ಲಿ ಶಾಲಾ ಶಿಕ್ಷಕರು, ಅಂಗನಾಡಿ ಕಾರ್ಯಕರ್ತೆಯರು, ಶಾಲಾ ಮಕ್ಕಳು ಹಾಗೂ ಶಾಲಾ ಆಡಳಿತ ನಿರ್ವಹಣಾ ಸಮಿತಿಯ ಸದಸ್ಯರನ್ನು ತೊಡಗಿಸಿಕೊಳ್ಳಲು ಅಗತ್ಯ ಕ್ರಮವಹಿಸುವುದು.

6. ಕುಡಿಯುವ ನೀರಿನ ಗುಣಮಟ್ಟ ಪರೀಕ್ಷೆಯ ಕುರಿತು ಸಮುದಾಯದಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವುದು, ಬೂದು ನೀರು ನಿರ್ವಹಣೆ, ಮಳೆ ನೀರು ಕೊಯಲು ಪದ್ಧತಿ ಅಳವಡಿಕೆ, ನೀರು ಸಂರಕ್ಷಣಾ ವಿಧಾನಗಳ ಅಳವಡಿಕೆ ಸೇರಿದಂತೆ ಕುಡಿಯುವ ನೀರಿನ ಅಗತ್ಯತೆ ಮತ್ತು ಪ್ರಸ್ತುತ ಪರಿಸ್ಥಿಯಲ್ಲಿ ಅದರ ಸಮರ್ಪಕ ಉಪಯೋಗ ಕುರಿತು ಗ್ರಾಮೀಣ ಸಮುದಾಯ ಸೇರಿದಂತೆ ಎಲ್ಲಾ ಭಾಗೀದಾರರಲ್ಲಿ ವ್ಯಾಪಕ ಜಾಗೃತಿ ಮೂಡಿಸುವುದು ಸೇರಿದಂತೆ ನೀರು ಮತ್ತು ನೈರ್ಮಲ್ಯ ಕುರಿತಾದ ಇತ್ಯಾದಿ ವಿಷಯಗಳಲ್ಲಿ ಎಲ್ಲರನ್ನು ತೊಡಗಿಸಿಕೊಳ್ಳುವುದಗಿದೆ.

ಮುಂದುವರೆದು, ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಶುದ್ಧ, ಸುರಕ್ಷಿತ ಕುಡಿಯುವ ನೀರು ಸಂಪರ್ಕ ಇಲ್ಲದಂತಹ ಅಂಗನವಾಡಿ ಕೇಂದ್ರಗಳು ಶಾಲೆಗಳು, ಆಶ್ರಮ ಶಾಲೆಗಳು, ವಸತಿ ಶಾಲೆಗಳು (ಹಾಸ್ಟಲ್‌ಗಳು), ಗ್ರಾಮ ಪಂಚಾಯಿತಿ ಕಚೇರಿ, ಸಮುದಾಯ ಶೌಚಾಲಯಗಳಿಗೆ ಕೊಳವೆ ನೀರು ಸಂಪರ್ಕ ಕಲ್ಪಿಸಲು ಪೂರಕವಾದ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು **ಅನುಬಂಧ-1**ರಲ್ಲಿ ವಿವರಿಸಿರುವ ಚಟುವಟಿಕೆಗಳನ್ನು ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ/ ಗ್ರಾಮಗಳ ಹಂತದಲ್ಲಿ ಆಯೋಜಿಸಲು ಕ್ರಮವಹಿಸಬೇಕಿದೆ.

ಈ ಆಂದೋಲನದ ಅವಧಿಯಲ್ಲಿ ಹಮ್ಮಿಕೊಳ್ಳುವ ವಿವಿಧ ಚಟುವಟಿಕೆಗಳ ಕುರಿತು ಉತ್ತಮ ಗುಣಮಟ್ಟದ ಫೋಟೋ ಹಾಗೂ ಉತ್ತಮ ನೈರ್ಮಲ್ಯ ಅಭ್ಯಾಸಗಳನ್ನು ಅಳವಡಿಸಿಕೊಂಡಿರುವ ಯಶೋಗಾಥೆ ಆಧರಿತ 30 ರಿಂದ 60 ಸೆಕೆಂಡುಗಳ ಅವಧಿಯ ವಿಡಿಯೋಗಳನ್ನು ತಯಾರಿಸಿ ಕೇಂದ್ರ ಕಛೇರಿಗೆ ಸಲ್ಲಿಸುವುದು. **ಈ ಕುರಿತಂತೆ ಅನುಬಂಧ-2**ರಲ್ಲಿ ತಿಳಿಸಿರುವ ಅಂಶಗಳನ್ನು ಪಾಲಿಸತಕ್ಕದು. ಒಟ್ಟಾರೆ ಈ ಆಂದೋಲನವನ್ನು ಯಶಸ್ವಿಗೊಳಿಸುವ ಮೂಲಕ ಗ್ರಾಮೀಣ ಪ್ರದೇಶದಲ್ಲಿನ ಎಲ್ಲಾ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಕುಡಿಯುವ ನೀರು ಒದಗಿಸಲು ಅಗತ್ಯಕ್ರಮವಹಿಸಲು ಕೋರಿದೆ.

ತಮ್ಮ ವಿಶ್ವಾಸಿ

ಆಯುಕ್ತರು
ಗ್ರಾ.ಕು.ನೀ ಮತ್ತು ನೈ ಇಲಾಖೆ.

**ಪ್ರತಿಯನ್ನು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ನಿರ್ದೇಶಕರು-ISA, ಗ್ರಾ.ಕು.ನೀ ಮತ್ತು ನೈ ಇಲಾಖೆ ಇವರ ಮಾಹಿತಿಗಾಗಿ
3. ಕ~~ಚೇರಿ ಪ್ರ~~ತಿ. ಮುಖ್ಯ ಅಭಿಯಂತರರು, ಗ್ರಾ.ಕು.ನೀ & ನೈ ಇಲಾಖೆ. ರವರ ಮಾಹಿತಿಗಾಗಿ.

**ಅನುಬಂಧ–1**

ಜಲ ಶಕ್ತಿ ಮಿಷನ್ ಭಾರತ್ ಸರ್ಕಾರವು ಜಲ ಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಅಂಗನವಾಡಿ ಕೇಂದ್ರ, ಶಾಲೆ, ಆಶ್ರಮ ಮತ್ತು ವಸತಿ ಶಾಲೆಗಳಿಗೆ ಕೊಳವೆ ನೀರು ಸಂಪರ್ಕ (ಕಾರ್ಯಾತ್ಮಕ ನಳ ಸಂಪರ್ಕ) ಕಲ್ಪಿಸಲು ವಿಶೇಷ ಆಂದೋಲನವನ್ನು ಆಯೋಜಿಸಿದೆ.

| ಕ್ರಸಂ | ಚಟುವಟಿಕೆಗಳ ವಿವರ | ಜವಾಬ್ದಾರಿ | ಅವಧಿ/ |
|---|---|---|---|
| 1 | ➢ ಅಂಗನವಾಡಿ ಕೇಂದ್ರ, ಶಾಲೆ, ಆಶ್ರಮ ಮತ್ತು ವಸತಿ ಶಾಲೆಗಳಿಗೆ ಕೊಳವೆ ನೀರು ಸಂಪರ್ಕ (ಕಾರ್ಯಾತ್ಮಕ ನಳ ಸಂಪರ್ಕ) ಕಲ್ಪಿಸಲು ವಿಶೇಷ ಆಂದೋಲನಕ್ಕೆ ಚಾಲನೆ ನೀಡುವುದು. | ಜಿಲ್ಲಾ ಜಿಲ್ಲಾ ಉಸ್ತುವಾರಿ ಸಚಿವರು/ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು/ ಚುನಾಯಿತಿ ಪ್ರತಿನಿಧಿಗಳು/ ಅಧಿಕಾರಿಗಳು | **11.11.2020** |
| 2 | ➢ ಮಕ್ಕಳ ಬೆಳವಣಿಗೆಗೆ ಶುಚಿತ್ವ ಮತ್ತು ಶುದ್ಧ ಸುರಕ್ಷಿತ ಕುಡಿಯುವ ನೀರಿನ ಪ್ರಾಮೂಕ್ಯತೆ ಕುರಿತು ಗ್ರಾಮಿಣ ಸಮುದಾಯ, ಅಂಗನವಾಡಿ ಕಾರ್ಯಕರ್ತೆಯರು, ಶಾಲಾ ಶಿಕ್ಷಕರು, ಶಾಲಾ ಆಡಳಿತ ನಿರ್ವಹಣಾ ಸಮಿತಿಯೊಂದಿಗೆ ಚರ್ಚೆ ಹಾಗೂ ಈ ಕುರಿತು ಜಾಗೃತಿ ಮೂಡಿಸುವುದು.<br>➢ ಎಲ್ಲಾ ಅಂಗನವಾಡಿ ಕೇಂದ್ರಗಳು, ಶಾಲೆ, ಆಶ್ರಮಶಾಲೆ (ವಸತಿ ಶಾಲೆ)ಗಳಲ್ಲಿ ನಿರಂತರ ಶೌಚಾಲಯ ಬಳಕೆ, ನೀರಿನ ಸರಬರಾಜು, ವೈಯಕ್ತಿಕ ಶುಚಿತ್ವ, ಉತ್ತಮ ನೈರ್ಮಲ್ಯ ಅಭ್ಯಾಸಗಳ ಪ್ರಾಮುಖ್ಯತೆ ಕುರಿತು ವ್ಯಾಪಕ ಅರಿವು ಮೂಡಿಸುವುದು. | ಜಿಲ್ಲೆಗಳಲ್ಲಿ ನೇಮಕವಾಗಿರುವ ಅನುಷ್ಠಾನ ನೆರವು ಸಂಸ್ಥೆಗಳ ಮೂಲಕ ಜಿಲ್ಲೆಯ ಕ್ರಿಯಾ ಯೋಜನೆಯಲ್ಲಿನ ವಿವಿಧ ಐ.ಇ.ಸಿ ಚಟುವಟಿಕೆಗಳಲ್ಲಿ **(ಬೀದಿ ನಾಟಕ, ಗ್ರಾಮ ಸಭೆ, VAP ಸೇರಿದಂತೆ ಇತರೆ ಚಟುವಟಿಕೆಗಳಲ್ಲಿ)** ಈ ವಿಷಯ ಕುರಿತು ಜಾಗೃತಿ ಮೂಡಿಸಲು ಕ್ರಮವಹಿಸುವುದು. | |
| 4 | ➢ ಶುದ್ಧ ಸುರಕ್ಷಿತ ಕುಡಿಯುವ ನೀರು,. ಶೌಚಾಲಯ ಬಳಕೆ, ಉತ್ತಮ ನೈರ್ಮಲ್ಯ ಅಭ್ಯಾಗಳನ್ನು ರೂಢಿಸುವುದು, ಮನೆಮನೆಗೆ ಕಾರ್ಯಾತ್ಮಕ ನಳ ಸಂಪರ್ಕ ಕಲಿಸುವುದು ಇತ್ಯಾಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. | **ಕುಡಿಯುವ ನೀರು ಮತ್ತು ಸ್ವಚ್ಛ ಭಾರತ್ ಮಿಷನ್ (ಗ್ರಾ)** | |
| | **ಸ್ವಚ್ಛ ಭಾರತ್ ಮಿಷನ್ (ಗ್ರಾ)** | | |
| 5 | **ವಿಶ್ವ ಶೌಚಾಲಯ ದಿನಾಚರಣೆ ಪ್ರಯುಕ್ತ**<br>➢ ಕುಡಿಯುವ ನೀರಿನ ಗುಣ ಮಟ್ಟ ಪರೀಕ್ಷೆಯ ಕುರಿತು ಸಮುದಾಯದಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವುದು, ಬೂದು ನೀರು ನಿರ್ವಹಣೆ, ಮಳೆ ನೀರು ಕೊಯಲು ಪದ್ದತಿ ಅಳವಡಿಕೆ, ನೀರು ಸಂರಕ್ಷಣಾ ವಿಧಾನಗಳ ಅಳವಡಿಕೆ ಸೇರಿದಂತೆ ಕುಡಿಯುವ ನೀರಿನ ಅಗತ್ಯತೆ ಮತ್ತು ಪ್ರಸ್ತುತ ಪರಿಸ್ಥಿಯಲ್ಲಿ ಅದರ ಸಮರ್ಪಕ ಉಪಯೋಗ ಕುರಿತು ಗ್ರಾಮೀಣ ಸಮುದಾಯ ಸೇರಿದಂತೆ ಎಲ್ಲಾ ಭಾಗೀದಾರರಲ್ಲಿ ವ್ಯಾಪಕ ಜಾಗೃತಿ ಮೂಡಿಸುವುದು.<br>➢ ಎಲ್ಲಾ ಅಂಗನವಾಡಿ ಕೇಂದ್ರಗಳು, ಶಾಲೆ, ಆಶ್ರಮಶಾಲೆ (ವಸತಿ ಶಾಲೆ)ಗಳಲ್ಲಿ ನಿರಂತರ ಶೌಚಾಲಯ ಬಳಕೆ, ನೀರಿನ ಸರಬರಾಜು, ವೈಯಕ್ತಿಕ ಶುಚಿತ್ವ, ಉತ್ತಮ ನೈರ್ಮಲ್ಯ ಅಭ್ಯಾಸಗಳ ಪ್ರಾಮುಖ್ಯತೆ ಕುರಿತು ವ್ಯಾಪಕ ಅರಿವು ಮೂಡಿಸುವುದು.<br>➢ ಕೈತೊಳೆಯುವ ಅಭ್ಯಾಸಗಳನ್ನು ರೂಢಿಸುವ ಚಟುವಟಿಕೆಗಳನ್ನು ಆಯೋಜಿಸುವುದು. | ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಜಾಗೃತಿ ಅಭಿಯಾನಗಳನ್ನು ಆಯೋಜಿಸುವುದು.<br>(2020–21 ಸಾಲಿನಲ್ಲಿ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಆಯೋಜಿಸಲು ರೂಪಿಸಿರುವ ಕ್ರಿಯಾ ಯೋಜನೆಯಲ್ಲಿನ ವಿವಿಧ ಐ.ಇ.ಸಿ ಚಟುವಟಿಕೆಗಳಲ್ಲಿ ಈ ಆಂದೋಲನದ ಕುರಿತು ಜಾಗೃತಿ ಮೂಡಿಸುವುದು. ಇದಕ್ಕೆ ಪ್ರತ್ಯೇಕ ಅನುದಾನ ನೀಡುವುದಿಲ್ಲ) | ನವೆಂಬರ್ 19, 2020. |

| | | | |
|---|---|---|---|
| | ➢ ಈ ಆಂದೋಲನ ಕುರಿತು ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ನಿರಂತರ ಪ್ರಚಾರ ಮಾಡುವುದು. | ಜಿಲ್ಲಾ ಐಇಸಿ ಸಮಾಲೋಚಕರು ಈ ಬಗ್ಗೆ ಅಗತ್ಯ ಕ್ರಮವಹಿಸಬೇಕು. | |
| 6 | ➢ ಶ್ರಮದಾನವನ್ನು ಆಯೋಜಿಸುವುದು, ಶಾಲೆ, ಆಶ್ರಮ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಶುದ್ಧ, ಸುರಕ್ಷಿತ ಕುಡಿಯುವ ನೀರು ಒದಗಿಸುವ ವಿವಿಧ ಚಟುವಟಿಕೆಗಳಲ್ಲಿ ಸ್ವಚ್ಛಗ್ರಹಿಗಳನ್ನು ತೊಡಗಿಸಿಕೊಳ್ಳುವುದು. | ಜಿಲ್ಲೆಯ ಐ.ಇ.ಸಿ ಕ್ರಿಯಾ ಯೋಜನೆಯಲ್ಲಿನ ಚಟುವಟಿಕೆಗಳಲ್ಲಿ ಈ ವಿಷಯವನ್ನು ಸೇರ್ಪಡೆ ಮಾಡಿಕೊಂಡು ಅನುಷ್ಠಾನ ಮಾಡುವುದು. | |
| 7 | ➢ ವಿಶೇಷ ಜಾಥ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜನರಲ್ಲಿ ನೀರು ಮತ್ತು ನೈರ್ಮಲ್ಯ ಕುರಿತು ಅರಿವು ಮೂಡಿಸಲು ಕ್ರಮವಹಿಸಬೇಕು. | | |
| 8 | ➢ ಸಾರ್ವಜನಿಕ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಸಮನ್ವಯತೆಯೊಂದಿಗೆ ವಿವಿಧ ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು<br>➢ ಜಿಲ್ಲೆಗಳು ತಮ್ಮ ಪ್ರಾದೇಶಕ ಅವಶ್ಯಕತೆಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡುವುದು. ಇದಕ್ಕೆ ಯಾವುದೇ ಅನುದಾನ ಒದಗಿಸುವುದಿಲ್ಲ. 2020-21ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ನಿಗಧಿಪಡಿಸಿರುವ ಅನುದಾನ ಮತ್ತು ಚಟುವಟಿಕೆಗಳಲ್ಲಿ ಈ ಅಂದೋಲನ ಕುರಿತು ಜಾಗೃತಿ ಮೂಡಿಸಲು ಕ್ರಮವಹಿಸುವುದು. | | |

ಆಯುಕ್ತರು
ಗ್ರಾ.ಕು.ನೀ ಮತ್ತು ನೈ ಇಲಾಖೆ.

**ಅನುಬಂಧ–2**

**ದಾಖಲೀಕರಣ**

ಜಲ ಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಅಂಗನವಾಡಿ ಕೇಂದ್ರ, ಶಾಲೆ, ಆಶ್ರಮ ಮತ್ತು ವಸತಿ ಶಾಲೆಗಳಿಗೆ ಕೊಳವೆ ನೀರು ಸಂಪರ್ಕ ಕಲ್ಪಿಸಲು ವಿಶೇಷ ಆಂದೋಲನದ ಹಿಮ್ಮಾಹಿತಿಯ ದಾಖಲಾತಿಗಾಗಿ ಈ ಕೆಳಕಂಡ ಪ್ರಕ್ರಿಯೆಗಳನ್ನು ನಡೆಸಿ ಡಿಸೆಂಬರ್ 15, 2020ರ ಒಳಗೆ ಕೇಂದ್ರ ಕಛೇರಿಗೆ ಅಗತ್ಯ ಮಾಹಿತಿಯನ್ನು ಸಲ್ಲಿಸಲು ಅಗತ್ಯ ಕ್ರಮವಹಿಸುವುದು.

1. **ಪ್ರಕರಣ ಅಧ್ಯಯನಗಳ ಸಂಗ್ರಹಣೆ: (Case studies)**
   - ✓ ಪ್ರತಿ ಜಿಲ್ಲೆಯಿಂದ ಒಂದು ಗುಣಾತ್ಮಕ ಪ್ರಕರಣ ಅಧ್ಯಯನ ಸಂಗ್ರಹಿಸುವುದು (**30 ಜಿಲ್ಲೆಗಳಿಂದ 30 ಪ್ರಕರಣ ಅಧ್ಯಯನ**). ಪ್ರಕರಣ ಅಧ್ಯಯನವು 2 ಪುಟಗಳಿಗೆ ಮೀರದಂತೆ ಗುಣಾತ್ಮಕವಾಗಿ ದಾಖಲಿಸಿ type ಮಾಡಿ ಇ– ಮೇಲ್ ಮೂಲಕ ಕಳುಹಿಸುವುದು.
   - ✓ ಕುಡಿಯುವ ನೀರಿನ ಕೊಳಾಯಿಗಳ/ಶೌಚಾಲಯಗಳ ಸೌಲಭ್ಯ ಪಡೆದಿರುವಂತಹ ಅಂಗನವಾಡಿ/ಶಾಲೆಗಳನ್ನು ಭೇಟಿ ಮಾಡಿ ಗುಣಾತ್ಮಕ ಮಾಹಿತಿಯನ್ನು ಈ ಕೆಳಕಂಡ ಪ್ರಶ್ನೆಗಳ ಮೂಲಕ ವಿವರಣೆ ನೀಡುವುದು.
     1. ಜಿಲ್ಲೆ/ತಾಲ್ಲೂಕು ಹೆಸರು
     2. ಊರಿನ ಹೆಸರು
     3. ಸೌಲಭ್ಯ ಪಡೆದಿರುವ ಸ್ಥಳ: ಅಂಗನವಾಡಿ/ಶಾಲೆ
     4. ಅಂಗನವಾಡಿ/ಶಾಲೆಯ ಹೆಸರು.
     5. ವಿದ್ಯಾರ್ಥಿಗಳ ಸಂಖ್ಯೆ
     6. ಶಾಲೆಯಲ್ಲಿನ ಸ್ವಚ್ಛತಾ ಚಟುವಟಿಕೆಗಳು
     7. ಕುಡಿಯುವ ನೀರಿನ ಕೊಳಾಯಿಗಳ/ಶೌಚಾಲಯಗಳ ಸೌಲಭ್ಯ ಪಡೆಯುವ ಮುಂಚಿನ ಶಾಲೆ/ಅಂಗನವಾಡಿಗಳ ಸ್ಥಿತಿ
     8. ಕುಡಿಯುವ ನೀರಿನ ಕೊಳಾಯಿಗಳ/ಶೌಚಾಲಯಗಳ ಸೌಲಭ್ಯ ಪಡೆದ ನಂತರದ ಶಾಲೆ/ಅಂಗನವಾಡಿಗಳ ಸ್ಥಿತಿ
     9. ಸ್ವಚ್ಛತೆಯ ಬಗೆಗಿನ ಫಲಾನುಭವಿಗಳ ಅಭಿಪ್ರಾಯ (ಭಾವಚಿತ್ರದ ಸಹಿತ).

2. **ಛಾಯಾಚಿತ್ರ (Photos):**
   ಕುಡಿಯುವ ನೀರಿನ ಕೊಳಾಯಿಗಳ/ಶೌಚಾಲಯಗಳ ಸೌಲಭ್ಯ ಪಡೆದಿರುವಂತಹ ಅಂಗನವಾಡಿ/ಶಾಲೆಗಳ ಚಟುವಟಿಕೆ ಸಹಿತ ಒಳ್ಳೆಯ ಗುಣಮಟ್ಟದ (High Resolution) 5 ರಿಂದ 6 ಛಾಯಾ ಚಿತ್ರಗಳನ್ನು ನೀಡಬೇಕು.

3. **ವಿಡಿಯೋ (Video):**
   ಪ್ರತಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊಳಾಯಿಗಳ/ಶೌಚಾಲಯಗಳ ಸೌಲಭ್ಯ ಪಡೆದಿರುವಂತಹ ಫಲಾನುಭವಿಗಳ 2 ವಿಡಿಯೋ ಚಿತ್ರಿಕರಣ (30 ರಿಂದ 60 ಸೆಕೆಂಡ್‌ಗಳನ್ನು ಮೀರಬಾರದು).

   ಸೂಚನೆ: ಮೊಬೈಲ್‌ನಲ್ಲಿ Landscapeಮೂಲಕ ವಿಡಿಯೋ ಚಿತ್ರಿಕರಣ ಮಾಡಬೇಕು, ನಿಶ್ಯಬ್ಧ ಸ್ಥಳದಲ್ಲಿ ಮಾಡಬೇಕು. ಮಾತನಾಡುವವರ ಧ್ವನಿ ಸರಿಯಾಗಿ ಕೇಳಿಸಬೇಕು. ಹಾಗೂ ಚಿತ್ರಣದಲ್ಲಿ ಸ್ಪಷ್ಟತೆ (clarity) ಇರಬೇಕು.

**ಈ ಕೆಳಕಂಡ ಮಾಹಿತಿಯನ್ನು ಫಲಾನುಭವಿಯು (ವಿದ್ಯಾರ್ಥಿ/ಪ್ರಾಂಶುಪಾಲರು) ವಿಡಿಯೋಗಳಲ್ಲಿ ನೀಡಬೇಕು**

- ಹೆಸರು, ಸ್ಥಳ.
- ಕುಡಿಯುವ ನೀರಿನ ಕೊಳಾಯಿಯ/ಶೌಚಾಲಯದ ಸಂಪರ್ಕದಿಂದ ಆಗಿರುವಂತಹ ಪ್ರಯೋಜನ
- ಇದರಿಂದ ತಮ್ಮ ಜೀವನ ಶೈಲಿಯಲ್ಲಿ ಆದಂತಹ ಬದಲಾವಣೆ
- ತಮ್ಮ ಶಾಲೆ/ಅಂಗನವಾಡಿಯ ಸ್ವಚ್ಛತೆಯ ಬಗೆಗಿನ ಅಭಿಪ್ರಾಯ
- ಜಲ ಜೀವನ್ ಮಿಷನ್ ಯೋಜನೆಯ ಬಗೆಗಿನ ಒಟ್ಟಾರೆ ಅಭಿಪ್ರಾಯ

**ಮಾಹಿತಿಯನ್ನು: ಇ–ಮೇಲ್ ವಿಳಾಸ: wsso.kar14@gmail.comಗೆ ಕಳುಹಿಸತಕ್ಕದು. ದಾಖಲೀಕರಣ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಶ್ರೀಮತಿ ಕವಿತ. ಕೆ (ಡಾಕ್ಯುಮೆಂಟೇಷನ್ ಎಕ್ಸ್‌ಪರ್ಟ್) ಮೊ.ಸಂ– 7676462553**

ಪರಿಹಾರ
parihara
9480985555



ಆತ್ಮೀಯ...
ಶಿಕ್ಷಕರೇ, ಆಶಾ–ಅಂಗನವಾಡಿ
ಕಾರ್ಯಕರ್ತೆಯರೇ
ವಿದ್ಯಾರ್ಥಿಗಳೇ ಹಾಗೂ
ಸಾರ್ವಜನಿಕರೇ.

**ನಿಮ್ಮ ಶಾಲೆ/ಅಂಗನವಾಡಿಯಲ್ಲಿ ನಳದ ನೀರು ಮತ್ತು ಶೌಚಾಲಯದ ವ್ಯವಸ್ಥೆಯಿಲ್ಲವೇ?**



ಈ ಸೌಲಭ್ಯಗಳು ಇಲ್ಲದಿದ್ದಲ್ಲಿ
ಈಗಲೇ ನಮ್ಮ ಪರಿಹಾರ
ಸಹಾಯವಾಣಿಗೆ ಕರೆಮಾಡಿ

**94809 85555**

ನಮ್ಮನ್ನು ಹಿಂಬಾಲಿಸಿ : swachhamevajayate.org rdpr.karnataka.gov.in